

ಎದೆಹಾಲು ಕುಡಿಯುವುದು ಬಿಟ್ಟಾಗಿನಿಂದ, ಏಳು ವರ್ಷಗಳಲ್ಲಿ ಕೊಂಡ ಕುರಿಗಳು, ಅವುಗಳ ಮರಿಗಳು ಸೇರಿ ಈವರೆಗೆ ಆರು ಕುರಿಗಳಾಗಿದ್ದವು. ಈ ಕುರಿಗಳ ಏಳಿಗೆಯಲ್ಲಿ ಮಗಳ ಭವಿಷ್ಯವನ್ನು ಕಾಣುತ್ತಿದ್ದಳು.

ರತ್ನಾಲು ಸರಕಾರಿ ಕನ್ನಡ ಶಾಲೆಯಲ್ಲಿ ನಾಲ್ಕನೆಯ ತರಗತಿ ಪರೀಕ್ಷೆಗೆ ಓದುತ್ತಿದ್ದ ಬಾಲೆ. ಅವಳಿಗೆ ಅಪ್ಪನ ಗುಣಗಳು ಒಂದೊಂದಾಗಿ ಅರ್ಥವಾಗುತ್ತಿದ್ದವು. ನಾಲ್ಕನೆಯ ತರಗತಿಗೆ ಹೋದ ಮೊದಲನೆಯ ದಿನ, ರಾತ್ರಿ ಕುಡಿದು ಬಂದಿದ್ದ ಅವನು ದೊಡ್ಡ ರಂಪಾಟ ನಡೆಸಿದ್ದ. ಅಮ್ಮನ ಹೊಟ್ಟೆ ಹೊಟ್ಟೆಗೇ ಒದೆಯುತ್ತಿದ್ದ. ಬೆನ್ನಿಗೆ ಗುದ್ದಿನ ಮೇಲೆ ಗುದ್ದು ಹಾಕುತ್ತಿದ್ದ. ಅಳುತ್ತ ಅಡ್ಡಬಂದ ರತ್ನಾಲುವಿಗೂ ಗುದ್ದಿದ. ಮಿಂಡನ ಜೊತೆ ಕುಲುಕುತ್ತೀಯೇನೇ ಎಂದು ಅಬ್ಬರಿಸುತ್ತಿದ್ದ. ಆ ಮಿಂಡನಾರೆಂದು ಚಿನ್ನಪಾಪಲುವಿಗೇ ತಿಳಿಯದು. ಅವನೊಳಗೆ ಅವಳನ್ನು ಕಾಡುವ ಪಿಶಾಚಿಯಿತ್ತು. ಅವನು ಕುಡಿದು ಅದನ್ನ ಕೆರಳಿಸುತ್ತಿದ್ದ. ಆಗ ಮನೆಯಲ್ಲಿ